ಜಗುಲಿಯ ಮೇಲೆ ಕುಳಿತು, ಪಕ್ಕದಲ್ಲಿ ಕುಳ್ಳಿರಿಸಿಕೊಂಡು, ನನ್ನ ತಲೆ ಸವರುತ್ತ ಹೇಳತೊಡಗಿದಳು.

'ನಾನು ನಿಮ್ಮ ತಂದೆಯನ್ನು ಎರಡು ವರ್ಷದವನಿದ್ದಾಗಲೆ ಅನಾಥನನ್ನಾಗಿಸಿ ಹೊರಟು ಹೋದೆ. ತಪ್ಪು ಮಾಡಿದೆ. ಏನು ಮಾಡಲಿ, ಆಗ ವಿಧಿಯ ಕೈಲಿ ಸಿಕ್ಕಿಕೊಂಡು ಅಸಹಾಯಕಳಾಗಿ ನಲುಗಿ ಹೋಗಿದ್ದೆ, ಬೊಂಬೆಯಂತಾಗಿದ್ದೆ. ಯಾರು ಯಾರೋ ಪ್ರಪಂಚ ನಾಯಕರ ಮಹಾಯೋಜನೆಗಳಿಗೆ ಬಲಿಯಾಗಿದ್ದ ಜೀವ ನನ್ನದು. ಅಂದು ನಿಮ್ಮ ತಂದೆಯನ್ನು ಬಿಟ್ಟುಹೋದಾಗ ನಾನೇ ಒಂದು ಅಪರಿಚಿತ ಪ್ರಪಂಚಕ್ಕೆ ಕಾಲಿಡುತ್ತಿದ್ದೆ. ಹಾಗಾಗಿ ನಿಮ್ಮ ತಂದೆಯನ್ನೂ ಕರೆದೊಯ್ದು ಅಲ್ಲಿ ಎದುರಾಗಬಹುದಾದ ಅನಿರೀಕ್ಷಿತ ಕಷ್ಟಗಳಿಗೆ, ಅತಂತ್ರ ಜೀವನಕ್ಕೆ ಆತನನ್ನೂ ತಳ್ಳಲು ಮನಸ್ಸಾಗಲಿಲ್ಲ' ಎಂದು ಇನ್ನೂ ಏನೇನೋ ಹೇಳಿದ್ದಳು; ಆಗ ಅಷ್ಟಾಗಿ ಅರ್ಥವಾಗಿರಲಿಲ್ಲ. ಸ್ವಲ್ಪ ಹೊತ್ತಿನ ನಂತರ ನನ್ನನ್ನು ತನ್ನ ಜೊತೆಗೆ ಬರುವೆಯಾ ಎಂದು ಕೇಳಿದಳು.

'ಎಲ್ಲಿಗೆ?' ಎಂದೆ.

'ಲಾಸಾಗೆ... ಟಿಬೆಟ್ಟಿಗೆ...' ಎಂದಳು. ನಾನು ಅದೇನೆಂದು ಅರ್ಥವಾಗದೆ ತಲೆಯಾಡಿಸಿ,

'ಒಲ್ಲೆ. ನಾನು ಬರೊಲ್ಲ' ಎಂದೆ. ಅದನ್ನು ಕೇಳಿ, 'ನಿನ್ನ ಈ ಗುಣ ನನ್ನಲ್ಲಿದ್ದಿದ್ದರೆ, ನಾನು ಇಂದು ಈ ದುಃಖ ಪಡುವ ಅವಶ್ಯಕತೆ ಬರುತ್ತಿರಲಿಲ್ಲ. ನೀನೂ ಹೀಗೆ ಒಬ್ಬಂಟಿಯಾಗುತ್ತಿರಲಿಲ್ಲ' ಎಂದಳು. ಏನು ಹೇಳುತ್ತಿದ್ದಾಳೆ ಎಂದು ತಿಳಿಯದಾದರೂ, ಅದು ನನ್ನ ಅಜ್ಜಿ ಎಂಬ ಸುಖಭಾವ ಮತ್ತು ತಾನಾಗಿಯೇ ನನ್ನ ತಂದೆಯನ್ನು ಹುಡುಕಿ ಬಂದಿರುವಳೆಂಬ ಸಂತಸದಿಂದ ಆಕೆ ಹೇಳಿದ್ದನ್ನೆಲ್ಲ ನಂಬತೊಡಗಿದೆ. ಆಕೆಯ ಮುಖವನ್ನೇ ನೋಡುತ್ತ ಕುಳಿತೆ. ಆದರೆ ಆಕೆಯ ಜೊತೆಗೆ ಲಾಸಾಗೆ ಹೋಗಲು ಸುತರಾಮ್ ನಿರಾಕರಿಸಿದೆ. ಕೊನೆಗೆ ಕನಿಷ್ಠ ಅಂದಿನ ರಾತ್ರಿಗಾದರೂ ತನ್ನ ಜೊತೆಯಲ್ಲಿ ಹತ್ತಿರದಲ್ಲಿಯೆ, ಅವರು ತಂಗಿರುವ ಕಡೆ ಬರುವಂತೆ ಒತ್ತಾಯಿಸಿ ಒಪ್ಪಿಸಿದಳು. ನನಗೆ ಹಳ್ಳಿಯಿಂದ ಹೊರಡಲು ಇಷ್ಟವಿರಲಿಲ್ಲವಾದರೂ, ನನ್ನನ್ನು ನೋಡಿಕೊಳ್ಳುತ್ತಿದ್ದ ಪಕ್ಕದ ಮನೆಯ ಹಿರಿಯರೊಂದಿಗೆ ಮಾತನಾಡಿ, ಅವರನ್ನೂ ಆಕೆಯೇ ಒಪ್ಪಿಸಿದಳು. ನನಗೆ ಇಷ್ಟವಾಗಲಿಲ್ಲವೆಂದರೆ ಮರುದಿನವೆ ಕರೆತಂದು ಬಿಟ್ಟುಹೋಗುವುದಾಗಿ ನನ್ನ ಹಿರಿಯರಿಗೆ ಹೇಳಿ ಕರೆದೊಯ್ದಳು. ತಕ್ಷಣ ಅನತಿದೂರದಲ್ಲಿ ಕಾಯುತ್ತ ಕುಳಿತಿದ್ದ ಭಿಕ್ಕುಗಳತ್ತ ಕೂಗಿ ಗಮನ ಸೆಳೆದು ಏನನ್ನೋ ಹೇಳಿದಳು. ಅವರು ಹಿಂದಿರುಗಿ ಬಂದರು.

ಹಳ್ಳಿಯವರೆಗೆ ಅವರು ಒಂದು ಜೀಪಿನಲ್ಲಿ ಬಂದಿದ್ದರು. ಆ ಜೀಪಿನಲ್ಲಿಯೆ ನನ್ನನ್ನು ಕರೆದೊಯ್ದರು. ನಮ್ಮ ಹಳ್ಳಿಯಿಂದ ಸುಮಾರು 56 ಕಿ.ಮೀ. ಗಳ ದೂರದಲ್ಲಿ, ನದಿಯ ಪಕ್ಕದಲ್ಲಿ ಸ್ಥಾಪಿಸಿದ್ದ ಒಂದು ಶಿಬಿರದ ಬಳಿ ಬಂದೆವು. ಸುಮಾರು 60 ಜನರ ಗುಂಪು ಅಲ್ಲಲ್ಲಿ ಹಾಕಿದ್ದ ಹಲವು ಬಿಡಾರಗಳಲ್ಲಿ ತಂಗಿತ್ತು. ನದಿಯ ಬಳಿ ಇಡೀ ಗುಂಪಿಗೆ ಅಡುಗೆ ಮಾಡಲೆಂದು ಎಲ್ಲವೂ ಸಜ್ಜಾಗಿತ್ತು. ನಮ್ಮ ಅಜ್ಜಿಯ ಬಿಡಾರದಲ್ಲಿ ನನಗೂ ತಂಗಲು ವ್ಯವಸ್ಥೆ ಮಾಡಿದರು. ಸುಮಾರು ಸಂಜೆ ಏಳು ಗಂಟೆಗೆ ಎಲ್ಲರೂ ಊಟ ಮುಗಿಸಿದರು. ಅಜ್ಜಿ ಅಂದು ರಾತ್ರಿ ಏನನ್ನೂ ಮಾತನಾಡಲಿಲ್ಲ. ಬದಲಿಗೆ ಹೊರಗೆ ನದಿಯ ಬಳಿ ತಮ್ಮ ವ್ಯವಸ್ಥಾಪಕರೊಂದಿಗೆ ಕುಳಿತು ಬಹಳ ಹೊತ್ತಿನವರೆಗೆ ಹಲವಾರು ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಅವರು ಬರುವ ಮುನ್ನ ನಾನು ನಿದ್ದೆಗೆ ಜಾರಿದ್ದೆ.

(ಮುಂದಿನ ಸಂಚಿಕೆಗೆ)